ಪಶುವೈದ್ಯಕೀಯ ಔಷಧಿಗಳಿಗಾಗಿ ವೆಚ್ಚ

108 (314): ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಮಾನ್ಯ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಶು ವೈದ್ಯಕೀಯ ಇಲಾಖೆಯಿಂದ ಔಷಧಿಗಳಿಗಾಗಿ 2008–09 ಹಾಗೂ 2009–10ನೇ ಸಾಲಿನಲ್ಲಿ ವೆಚ್ಚ ಮಾಡಲಾದ ಹಣವೆಷ್ಟು? (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು);

ಆ) ಗ್ರಾಮೀಣ ಪ್ರದೇಶದಲ್ಲಿರುವ ಪಶು ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಈ ಚಿಕಿತ್ಸಾಲಯಗಳಲ್ಲಿ ಅಗತ್ಯ ಪಶು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಇದೆಯೇ?

ಉ) ಇಲ್ಲದಿದ್ದಲ್ಲಿ ಅಧಿಕಾರಿ/ವೈದ್ಯರು/ಸಿಬ್ಬಂದಿ ವರ್ಗದವರನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ರೇವುನಾಯಕ ಬೆಳಮಗಿ (ಪಶು ಸಂಗೋಪನಾ ಸಚಿವರು):

ಅ) 2008–09ನೇ ಸಾಲಿನಲ್ಲಿ ರೂ.955.86 ಲಕ್ಷ ಹಾಗೂ 2009–10ನೇ ಸಾಲಿನಲ್ಲಿ ರೂ. 1097.41 ಲಕ್ಷಗಳನ್ನು ಔಷಧಿಗಳಿಗಾಗಿ ವೆಚ್ಚ ಮಾಡಲಾಗಿದೆ. ವರ್ಷವಾರು ಜಿಲ್ಲಾವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಬಂದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ರಾಜ್ಯದ ಪಶು ವೈದ್ಯಕೀಯ ಸಂಸ್ಥೆಗಳ ಮಂಜೂರಾದ ಭರ್ತಿ ಮಾಡಲಾದ ಹಾಗೂ ಖಾಲಿಯಿರುವ ಅಧಿಕಾರಿ ಮತ್ತು ಸಿಬ್ಬಂದಿ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ	ಹುದ್ದೆ	ಹುದ್ದೆಗಳು		
		ಮಂಜೂರು	ಭರ್ತಿ	ಖಾಲಿ
1	ಪ.ವೈ. ಅಧಿಕಾರಿ	2392	1621	771
2.	ಪ.ವೈ. ಮೇಲ್ವಿಚಾರಕರು	309	283	25
3.	ಹಿ.ಪ.ವೈ. ಪರೀಕ್ಷಕರು	2102	2080	22
4.	ಪ.ವೈ.ಪರೀಕ್ಷಕರು	1816	1549	267
5.	ಪ.ವೈ.ಸಹಾಯಕರು	1960	960	1000
6.	'ಡಿ' ದರ್ಜೆ ನೌಕರರು	7271	5003	2268
	ಒಟ್ಟು	**15850**	**11496**	**4364**

ಊ) ಖಾಲಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತಿರುತ್ತದೆ:

1. **ಪಶು ವೈದ್ಯಾಧಿಕಾರಿಗಳು:** 276 ಹುದ್ದೆಗಳನ್ನು ವಿಶೇಷ ನೇಮಕಾತಿಯಡಿ ಭರ್ತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಆ ಸಂದರ್ಭದಲ್ಲಿ ಆದ್ಯತೆ ಮೇರೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

2. **ಪಶು ವೈದ್ಯಕೀಯ ಮೇಲ್ವಿಚಾರಕರು:** ಹಿರಿಯ ಪಶುವೈದ್ಯಕೀಯ ಪರೀಕ್ಷಕರಿಗೆ ಮುಂಬಡ್ತಿ ನೀಡುವ ಸಮಯದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

3. **ಹಿರಿಯ ಪಶುವೈದ್ಯಕೀಯ ಪರೀಕ್ಷಕರು:** ಪಶುವೈದ್ಯಕೀಯ ಪರೀಕ್ಷಕರಿಗೆ ಮುಂಬಡ್ತಿ ನೀಡುವ ಸಮಯದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

4. **ಪಶುವೈದ್ಯಕೀಯ ಪರೀಕ್ಷಕರು:** ಪಶು ವೈದ್ಯಕೀಯ ಸಹಾಯಕರಿಗೆ ಮುಂಬಡ್ತಿ ನೀಡುವ ಸಮಯದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು

5. **ಪಶುವೈದ್ಯಕೀಯ ಸಹಾಯಕರು:** 642 ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದ್ದು, ಆ ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

6. **'ಡಿ' ದರ್ಜೆ ನೌಕರರು:** ಹೊರಗುತ್ತಿಗೆ ಆಧಾರದ ಮೇಲೆ 300 ಹುದ್ದೆಗಳನ್ನು ಹಾಗೂ 1400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗಿದೆ. ಅಲ್ಲದೆ ಅನುಕಂಪದ ಆಧಾರದ ಮೇಲೆ ಹಾಗೂ ಬೇರೆ ಇಲಾಖೆಯಿಂದ ಮರುವಿನ್ಯಾಸ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಈ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ– 1

ವಿಧಾನಸಭಾ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 314 ಕ್ಕೆ ಪೂರಕ ಮಾಹಿತಿ.

2008–09 ಮತ್ತು 2009–10ನೇ ಸಾಲಿನಲ್ಲಿ ಔಷಧಿ ಮತ್ತು ರಾಸಾಯನಿಕಗಳ ಖರೀದಿಗೆ ರಾಜ್ಯ ವಲಯದಲ್ಲಿ ವೆಚ್ಚ ಮಾಡಲಾದ ಜಿಲ್ಲಾವಾರು ವಿವರ:

ಕ್ರ.ಸಂ	ಜಿಲ್ಲೆಗಳು	2008–09 (ರೂ.ಲಕ್ಷಗಳಲ್ಲಿ)	2009–10 (ರೂ.ಲಕ್ಷಗಳಲ್ಲಿ)
1.	ಬೆಂಗಳೂರು ನಗರ	12.10	13.89
2.	ಬೆಂಗಳೂರು ಗ್ರಾಮಾಂತರ	14.70	16.88
3.	ರಾಮನಗರ	21.72	24.94
4.	ಕೋಲಾರ	21.72	24.94
5.	ಚಿಕ್ಕಬಳ್ಳಾಪುರ	22.23	25.52
6.	ತುಮಕೂರು	53.10	60.96
7.	ಶಿವಮೊಗ್ಗ	47.80	54.87
8.	ಚಿತ್ರದುರ್ಗ	38.23	43.89
9.	ದಾವಣಗೆರೆ	39.82	45.70
10.	ಮೈಸೂರು	41.56	47.71
11.	ಚಾಮರಾಜನಗರ	20.78	23.86
12.	ಮಂಡ್ಯ	35.40	40.64

13.	ಹಾಸನ	47.80	54.87
14.	ದಕ್ಷಿಣ ಕನ್ನಡ	23.90	27.43
15.	ಉಡುಪಿ	25.15	28.88
16.	ಚಿಕ್ಕಮಗಳೂರು	30.83	35.40
17.	ಕೊಡಗು	09.85	11.31
18	ಬೆಳಗಾವಿ	86.89	99.76
19.	ಧಾರವಾಡ	18.74	21.52
20	ಹಾವೇರಿ	29,87	34.30
21	ಗದಗ್	14.70	16.88
22.	ಬಿಜಾಪುರ	28.11	32.28
23.	ಬಾಗಲಕೋಟೆ	32.96	37.84
24.	ಉತ್ತರಕನ್ನಡ	28.96	33.25
25.	ಗುಲ್ಬರ್ಗಾ	73.52	84.41
26.	ಬಳ್ಳಾರಿ	41.56	47.74
27.	ರಾಯಚೂರು	32.23	43.89
28.	ಕೊಪ್ಪಳ	24.50	28.13
29.	ಬೀದರ್	28.96	33.25
	ಒಟ್ಟು	**955.86**	**1097.41**

ಪಶು ಆಸ್ಪತ್ರೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ

109 (294): ಶ್ರೀ ಪಾಟೀಲ್ ಎ. ಎಸ್. (ನಡಹಳ್ಳಿ): ದೇವರ ಹಿಪ್ಪರಗಿ: ಮಾನ್ಯ ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಜಿಲ್ಲೆ ದೇವರ ಹಿಪ್ಪರಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕಳೆದ 2008–09, 2009–10ರಿಂದ ಇಲ್ಲಿಯವರೆಗೆ ಪಶು ಸಂಗೋಪನಾ ಇಲಾಖೆಯಿಂದ ಯಾವ ಯಾವ ಅಬಿವೃದ್ಧಿ ಕಾಮಗಾರಿಗಳು ಕೈಗೊಳ್ಳಲಾಗಿದೆ.